# ಕೇಳಲೊಲ್ಲನೆ ಎನ್ನ ಮಾತನು ರಂಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 199.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 250.
3. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 27.
4. **Note:** Lyrics mentioned without highlights are as per Ref. 1. The wordings given in yellow highlights are as per Ref. 2. The wordings in Ref. 3 are almost similar to Ref. 1 and Ref. 2. Hence, they are not considered here.
5. **Note:** Singer has followed lyrics as in Ref. 2.
6. **Note:** The Ankita is different in both the books. We have considered Ref.1 as standard and taken that Ankita for listing.

ರಾಗ ಮುಖಾರಿ ತಾಳ ಆದಿ

ಕೇಳಲೊಲ್ಲನೆ ಎನ್ನ ಮಾತನು ರಂಗ ॥ ಪ ॥
ಕಾಳಿಯಮರ್ದನ ಕೃಷ್ಣಗೆ ಪೇಳೆ ಗೋಪ್ಯಮ್ಮ ಬುದ್ಧಿ ॥ ಅಪ ॥
(ಕಾಳಿಂಗಮರ್ದನಗೆ ಹೇಳೆ ಗೋಪ್ಯಮ್ಮ ಬುದ್ಧಿ)

ಬಿಟ್ಟ ಕಂಗಳ ಮುಚ್ಚಲೊಲ್ಲನೆ ಬೇಗ
ಬೆಟ್ಟಕ್ಕೆ ಬೆನ್ನೊಡ್ಡಿ (ನಿಂತನೆ) (ನಿಂದನೆ)
ಸಿಟ್ಟಿಸಿ ಕೋರೆ ಹಲ್ಲ ತೋರ್ದನೆ ಅತಿ
ಗಟ್ಟಿ ಉಕ್ಕಿನ ಕಂಭವನೊಡೆದು ಬಂದನೆ ॥ ೧ ॥

ಮೂರಡಿ ಭೂಮಿಯ ಬೇಡಿದನೆ (ಅರಸರ) (ನೃಪರ)
ಬೇರ ಕಡಿಯೆ ಕೊಡಲಿ ತಂದನೆ
ನಾರ ಸೀರೆಯನಿಟ್ಟುಕೊಂಡನೆ ಬೇಗ
ಚೋರತನದಿ ಹರವಿ ಹಾಲ ಕುಡಿದನಮ್ಮ ॥ ೨ ॥

ಬತ್ತಲೆ ನಾರಿಯರನಪ್ಪಿದ ಬೇಗ

ಉತ್ತಮ (ಅಶ್ವವ) (ತೇಜಿಯ) ಹತ್ತಿದ

(ಹತ್ತವತಾರವ ತಾಳಿದ ನಮ್ಮ

ದಿಟ್ಟ ಮೂರುತಿ ಪುರಂದರ ವಿಠಲ) ॥ ೩ ॥

(ಹತ್ತವತಾರವನೆತ್ತಿದ ಜಗದ

ಕರ್ತ ಶ್ರೀ ಪುರಂದರ ವಿಠ್ಠಲ ರಾಯನು)

## ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಇನ್ನೊಬ್ಬ ಗೋಪಸ್ತ್ರಿ, ಬಾಲಕೃಷ್ಣನು ತನ್ನ ಮಾತಾ ಕೇಳಲೊಲ್ಲನು, ಅವನಿಗೆ ಬುದ್ಧಿಯನ್ನು ಹೇಳು ಎಂದು ಯಶೋದೆಗೆ ಹೇಳಿದಂತೆ ದಾಸರ ರಚನೆ ಇಲ್ಲಿದೆ. ಈ ಹಾಡಿನಲ್ಲಿಯೂ ದಶಾವತಾರದ ರೂಪಕಗಳಿವೆ.

**ಬಿಟ್ಟ ಕಂಗಳ ಮುಚ್ಚಲೊಲ್ಲ** – ಮತ್ಸ್ಯಾವತಾರ (ಮೀನಿನ ಕಣ್ಣಿಗೆ ರೆಪ್ಪೆಯಿರುವುದಿಲ್ಲವಾಗಿ ಕಣ್ಣನ್ನು ಮುಚ್ಚಲಾರದೆಂದು ಪ್ರತೀತಿ)

**ಬೆಟ್ಟಕ್ಕೆ ಬೆನ್ನೊಡ್ಡಿ ನಿಂತನೆ** = ಕೂರ್ಮಾವತಾರ

**ಸಿಟ್ಟಿಂದ .... ತೋರ್ದನೆ** = ವರಾಹಾವತಾರ

**ಗಟ್ಟಿ ಉಕ್ಕಿನ ಕಂಭವನೊಡೆದು** = ನಾರಸಿಂಹಾವತಾರ

**ಮೂರಡಿ ಭೂಮಿಯ ಬೇಡಿದನೆ** = ವಾಮಾನವತಾರ

**ನೃಪರ ಬೇರ** .... – ಪರಶುರಾಮ ಅವತಾರ. (ಕ್ಷತ್ರಿಯರ ವಂಶವನ್ನೇ ನಿರ್ಮೂಲ ಮಾಡುವೆನೆಂದು ಹಟ ತೊಟ್ಟು)

**ನಾರ ಸೀರೆಯನಿಟ್ಟುಕೊಂಡನೆ** = ರಾಮಾವತಾರ (**ನಾರ ಸೀರೆ** – ಚೀರಾಜಿನ, ನಾರು ಮಡಿ)

**ಬೇಗ ಚೋರತನದಿ .... ಕುಡಿದನಮ್ಮ** = ಕೃಷ್ಣಾವತಾರ

**ಬತ್ತಲೆ ನಾರಿಯರನಪ್ಪಿದ ಬೇಗ** = ಬೌದ್ಧಾವತಾರ

**ಉತ್ತಮ ಅಶ್ವವ ಹತ್ತಿದ** = ಕಲ್ಕ್ಯಾವತಾರ

**Classification:** Keerthane
**Ankita:** purandara vittala
**Location:** NA
**Category:** dashavatara, Krishna leele, kALinga mardhana
**Sub-Category:** ranga, kalinga, gopi, buddi, kannu, parvata, krishna, sittu, bhumi, arasa, hengasu, hennu, halu, dashavatara, kudure, loka,
**Pravachana:** NA
**Explanation:** NA